ಶ್ರೀ ಬಿ.ಎಂ. ಇದಿನಬ್ಬ (ಶ್ರೀ ಜಿ.ಎಸ್. ಆಚಾರ್ (ಬೈಂದೂರು) ಇವರ ವರವಾಗಿ.—

ಮಾನ್ಯ ಅಧ್ಯಕ್ಷರೇ, ಅಲ್ಲಿ ಬಹಳ ಜನಕ್ಕೆ ಕೆಲಸ ಸಿಗುತ್ತದೆ. ನಿರುದ್ಯೋಗಿಗಳಿಗೆ ಬಹಳ ಉಪಕಾರವಾಗುತ್ತದೆ. ಆದ್ದರಿಂದ ಇದನ್ನು ತಾವು ಆಲೋಚನೆ ಮಾಡಿದರೆ ತುಂಬಾ ಉಪಕಾರವಾದೀತು ಎಂದು ಅಭಿಪ್ರಾಯ. ತಾವು ಏನು ಹೇಳುತ್ತೀರಿ ?

ಶ್ರೀ ಜೆ. ಹೆಚ್. ಪಟೇಲ್.—ಅಧ್ಯಕ್ಷರೇ, ಈಗ ಸಧ್ಯಕ್ಕೆ ಇಲ್ಲ. ಮುಂದೆ ವಿಚಾರ ಮಾಡೋಣ.

ಅಧ್ಯಕ್ಷರು.—ತಡೆಹಿಡಿದಿರುವ ಪ್ರಶ್ನೆಗಳನ್ನು ಮತ್ತೊಮ್ಮೆ ಕೂಗುತ್ತೇನೆ.

ಶ್ರೀ ಕೆ. ಕುಶಾಲ (ಸುಳ್ಯ) (ಪ್ರಶ್ನೆ ಸಂಖ್ಯೆ ೫೧೧); ಗೈರು ಹಾಜರಿ

ಶ್ರೀ ಗೌಳಿ ಮಹದೇವಪ್ಪ (ಗಂಗಾವತಿ)(,, ೪೯೭): ,,

ಶ್ರೀ ಕೆ.ಬಿ. ಶಾಣಪ್ಪ (ಶಹಾಬಾದ್) (,, ೭೪೯): ,,

ಶ್ರೀ ಟಿ.ಎಸ್. ಮಣಿ (ಕೆ.ಜಿ.ಎಫ್.) (,, ೨೪೬): ,,

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಸುಳ್ಯದಲ್ಲಿ ವಾಹನ ನಿಲ್ದಾಣದ ನಿರ್ಮಾಣ

೫೧೧. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳಿಂದ ವಾಹನ ನಿಲ್ದಾಣದ ಬಾಬ್ತು ರೂ. ೧೦,೦೦೦೦ (೧೦ ಲಕ್ಷ ರೂ,) ಮಂಜೂರಾಗಿದ್ದರೂ ನಿವೇಶನ ಮಂಜೂರಾತಿ ನೀಡದಿರುವುದು ನಿಜವೇ ;

ಆ) ನಿಲ್ದಾಣದ ಸ್ಥಳ ಮಂಜೂರಾತಿ ಯಾವ ಹಂತದಲ್ಲಿದೆ.

ಇ) ನಿಲ್ದಾಣದ ನಿರ್ಮಾಣದ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ರಾಜ್ಯ ಸಚಿವರು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ನಿವೇಶನವನ್ನು ಆಯ್ಕೆ ಮಾಡಿದ್ದು ಭೂಸ್ವಾಧೀನ ಕ್ಕಾಗಿ ಕೋರಿಕೊಳ್ಳಲಾಗಿದೆ.

ಆ) ಭೂಸ್ವಾಧೀನ ಪಡಿಸಿಕೊಳ್ಳಬೇಕಾದ ತಿಳಿಂವಳಿಕೆಯ ಪ್ರಕಟಣೆ ಇನ್ನೂ ಹೊರಡಿಸಿರುವುದಿಲ್ಲ.

ಇ) ನಿವೇಶನವು ನಿಗಮದ ವಶಕ್ಕೆ ಬಂದ ನಂತರ ಸಂಸ್ಥೆಯಿಂದ ಬಸ್ ನಿಲ್ದಾಣ ನಿರ್ಮಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಗಂಗಾವತಿ ನಗರದಲ್ಲಿ ಕುಡಿಯುವ ನೀರಿನ ಸರಬರಾಜಿನ ಬಗ್ಗೆ

೪೯೭. ಶ್ರೀ ಗೌಳಿ ಮಹದೇವಪ್ಪ (ಗಂಗಾವತಿ).—ಮಾನ್ಯ ನಗರಾಭಿವೃದ್ಧಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಂಗಾವತಿ ನಗರದಲ್ಲಿ ಕುಡಿಯುವ ನೀರಿನ ಅಭಾವ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ) ಕುಡಿಯುವ ನೀರಿನ ಅಭಾವವನ್ನು ನೀಗಿಸಲು ಸರ್ಕಾರದವರು ಯೋಜನೆಯನ್ನೇನಾದರೂ ರೂಪಿಸಿದ್ದಾರೆಯೆ;

ಇ) ಹಾಗಿದ್ದಲ್ಲಿ, ಆ ಯೋಜನೆಯು ಯಾವ ಹಂತದಲ್ಲಿದೆ?